4. ವರದಿಯನ್ನೊಪ್ಪಿಸುವುದು:

ಶ್ರೀ ಎ.ಟಿ.ರಾಮಸ್ವಾಮಿ(ಅಧ್ಯಕ್ಷರು ಹಕ್ಕುಭಾಧ್ಯತಾಸಮಿತಿ): ಸನ್ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ 2005 ಮತ್ತು 2006ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಉಪಾಧ್ಯಕ್ಷರೇ, ತಾವು ಈ ವಿಚಾರಕ್ಕೆ ಮಂಜೂರಾತಿ ಮಾಡಲಿಲ್ಲ. ವರಿದಿ ಮಂಡಿಸುವುದಕ್ಕೆ ಅನುಮತಿ ಕೊಡುತ್ತೇನೆಂದು ಹೇಳಲಿಲ್ಲ, ಇದು ನಮಗೆ ಯಾರಿಗೂ ಗೊತ್ತಿಲ್ಲ. ಈ ರೀತಿ ಸಭೆ ನಡೆಸಿದರೆ ಹೇಗೆ? ಅವರು ಕೇಳಿದಾಗ ತಾವು ಇಂತಹ ವರದಿಯನ್ನು ಮಂಡಿಸಲಿಕ್ಕೆ ಸದಸ್ಯರಿಗೆ ಅನುಮತಿ ಕೊಡುತ್ತೇನೆಂದು ಹೇಳಬೇಕೇ ಅಥವಾ ಬೇಡವೇ?

ಶ್ರೀ ಎ.ಟಿ. ರಾಮಸ್ವಾಮಿ: ಅನುಮತಿ ಕೇಳಿಯೇ ವರದಿ ಮಂಡಿಸಿರುವುದು.

ಉಪಾಧ್ಯಕ್ಷರು: ನಾನು ಒಪ್ಪಿಗೆ ಕೊಟ್ಟಿದ್ದೇನೆ.

ವರದಿಯನ್ನು ಮಂಡಿಸಲಾಗಿದೆ.

5. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ಡಾ., ರಾಜ್‌ಕುಮಾರ್‌ರವರ ಅಂತ್ಯಸಂಸ್ಕಾರದ ಸಮಯದಲ್ಲಿ ನಡೆದ ಘಟನೆಗಳ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠಕಲ್): ಮಾನ್ಯ ಉಪಾಧ್ಯಕ್ಷರೇ, ಮುಂಜಾನೆ ವಿರೋಧಪಕ್ಷದ ನಾಯಕರು ಮತ್ತು ಜೊತೆಯಲ್ಲಿ ಅನೇಕ ಮಾನ್ಯ ಸದಸ್ಯರು ಸಹಿ ಮಾಡಿ, ಕನ್ನಡದ ಅಭಿಮಾನಿ ನಟರಾದ ಡಾ., ರಾಜ್‌ಕುಮಾರ್‌ರವರ ನಿಧನ ಹೊಂದಿದ ಏಪ್ರಿಲ್ 12ನೇ ತಾರೀಖು ಮರೆಯಲಾರದಂಥ ದಿವಸ ಇತ್ತು, ಅಂದೇ ನಾವು ಕಂಡಂಥ ಕೆಲವು ಘಟನೆಗಳು ಮತ್ತು ಎರಡನೇ ದಿವಸ ಕೂಡ ನಡೆದಂಥ ಘಟನೆ ಬಗ್ಗೆ ಈ ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಪ್ರಸ್ತಾಪ ಮಾಡಿದ್ದೆವು. ಆದರೆ, ತಾವು ಇದನ್ನು ನಿಲುವಳಿ ಸೂಚನೆ ಮುಖಾಂತರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದನ್ನು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳಬೇಕು ಮತ್ತು "ನಿಮ್ಮ ಅನಿಸಿಕೆಗಳನ್ನು ಹೇಳಿದರೆ, ಸರ್ಕಾರ ಅದಕ್ಕೆ ಸ್ಪಂದಿಸುತ್ತದೆ" ಎಂಬ ಮಾತೂ ಕೂಡ ಹೇಳಿದಿರಿ. ಈ ವಿಷಯ ದೀರ್ಘವಾಗಿ ಚರ್ಚೆಯಾದ ಮೇಲೆ ಮುಂದೆ ಯಾವ ಕ್ರಮವನ್ನು ಜರುಸಬೇಕೆಂಬುದೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂಬ ಆಶ್ವಾಸನೆಯನ್ನು ಕೂಡ ತಾವು ಕೊಟ್ಟಿದ್ದೀರಿ. ಇವತ್ತು ನಾವು ಈ ವಿಷಯವನ್ನು